ತಂತಿ ವಿಳಾಸ: ಯೂನಿರೆಚ್
ದೂರವಾಣಿ ಸಂಖ್ಯೆ.: 2419677/2419361
ಫ್ಯಾಕ್ಸ್: 0821-2419363/2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಎಸಿ4/42/2016-17 ದಿನಾಂಕ:19-05-2016

## ಅಧಿಸೂಚನೆ

ವಿಷಯ: 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ (ಒಂದನೇ, ಮೂರನೇ ಮತ್ತು ಐದನೇ ಸೆಮಿಸ್ಟರ್)ಬಿ.ಎ./ಬಿ.ಎಸ್ಸಿ./ಬಿ.ಸಿ.ಎ./ಬಿ.ಕಾಂ./ಬಿ.ಟಿ.ಹೆಚ್./ಬಿ.ಪಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ಬಿ.ಫೈನ್‌ಆರ್ಟ್ಸ್./ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) ಪದವಿ ಕೋರ್ಸುಗಳ ಪ್ರವೇಶಾತಿ ಬಗೆಗೆ.

ಉಲ್ಲೇಖ: 1. ಈ ಕಛೇರಿ ಶೈಕ್ಷಣಿಕವೇಳಾಪಟ್ಟಿ ಅಧಿಸೂಚನೆ ಸಂಖ್ಯೆ:ಎಸಿ7(ಎ)/420/2010-11,ದಿ.13-04-2016.
2. ಈ ಕಛೇರಿಯ ವಿವಿಧ ಶುಲ್ಕಗಳ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/278/2015-16,ದಿ.11-05-2016.

*****

2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ./ ಬಿ.ಎಸ್ಸಿ./ ಬಿ.ಸಿ.ಎ./ ಬಿ.ಕಾಂ./ ಬಿ.ಟಿ.ಹೆಚ್./ ಬಿ.ಪಿ.ಎ./ ಬಿ.ಬಿ.ಎ./ಬಿ.ಎಸ್.ಡಬ್ಲ್ಯೂ./ಬಿ.ಫೈನ್‌ಆರ್ಟ್ಸ್./ಬಿ.ಎ.(ಪ್ರದರ್ಶನ ಕಲೆ)/ ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) (ಒಂದನೇ, ಮೂರನೇ ಮತ್ತು ಐದನೇ ಸೆಮಿಸ್ಟರ್)ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮಾಡಿಕೊಳ್ಳುವ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| | | |
|---|---|---|
| 1 | ಕೊನೆಯ ದಿನಾಂಕ ದಂಡ ಶುಲ್ಕವಿಲ್ಲದೆ | ದಿನಾಂಕ:15-07-2016 |
| 2 | ರೂ.300/- ದಂಡ ಶುಲ್ಕದೊಂದಿಗೆ | ದಿನಾಂಕ:16-07-2016 ರಿಂದ 22-07-2016 |
| 3 | ರೂ.500/- ದಂಡ ಶುಲ್ಕದೊಂದಿಗೆ | ದಿನಾಂಕ:23-07-2016 ರಿಂದ 30-07-2016 |

ಈ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳಂದೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾಯ ಕೋರ್ಸುಗಳಿಗೆ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳತಕ್ಕದ್ದು.

### ವಿದ್ಯಾರ್ಥಿಗಳಿಗೆ/ಪ್ರಾಂಶುಪಾಲರುಗಳಿಗೆ ಸೂಚನೆಗಳು:

1. ಕಡೆಯ ದಿನಾಂಕದ ನಂತರ ಪ್ರವೇಶಗಳನ್ನು ಮಾಡಿಕೊಳ್ಳಲಾಗುವುದಿಲ್ಲ.
2. ಸಂಬಂಧಿಸಿದ ಕಾಲೇಜಿನಲ್ಲಿ ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸಿ ರಶೀತಿ ಪಡೆಯಬೇಕು.
3. ಏಕ ಕಾಲದಲ್ಲಿ ಎರಡು ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಲು ಅವಕಾಶ ಇರುವುದಿಲ್ಲ.
4. ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಕಾಲೇಜುಗಳಿಂದ 3 ಮತ್ತು 5ನೇ ಸೆಮಿಸ್ಟರ್‌ಗೆ ವರ್ಗಾವಣೆ ಪ್ರವೇಶ ಬಯಸುವ ಅಭ್ಯರ್ಥಿಗಳನ್ನು ಹಿಂದಿನ ಕಾಲೇಜಿನ ಪ್ರಾಂಶುಪಾಲರ ಅನುಮತಿಯೊಡನೆ ಹಾಗೂ ಇತರೆ ಅರ್ಹತೆಗಳನ್ನು ವಿವರವಾಗಿ ಪರಿಶೀಲಿಸಿದ ಬಳಿಕ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಆಯಾ ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುವ ಐಚ್ಛಿಕ ವಿಷಯಗಳಿಗೆ ಮಾತ್ರ (ಲಭ್ಯತೆಯನ್ನು ಪರಿಗಣಿಸಿ,

ಸಂಖ್ಯಾಮಿತಿಯೊಳಗೆ) ಕಾಲೇಜಿನ ಪ್ರಾಂಶುಪಾಲರೇ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳಬಹುದು. **ಅಂತಹ ಅಭ್ಯರ್ಥಿಗಳ ವಿವರಗಳನ್ನು ನಿಗದಿತ ನಮೂನೆಯಲ್ಲೇ ವಿಶ್ವವಿದ್ಯಾನಿಲಯಕ್ಕೆ ಅನುಮೋದನೆಗೆ ಸಲ್ಲಿಸಬೇಕು(ಇದು ಪ್ರಥಮ ವರ್ಷಕ್ಕೆ ಅನ್ವಯವಾಗುವುದಿಲ್ಲ). ಯಾವುದೇ ಕಾರಣಕ್ಕೂ 4 ಮತ್ತು 6ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಪ್ರವೇಶ ಮಾಡಿಕೊಳ್ಳುವಂತಿಲ್ಲ. ಒಂದು ಪಕ್ಷ ಮಾಡಿದ್ದೇ ಆದರೆ, ಆ ಕಾಲೇಜಿನ ಪ್ರಾಂಶುಪಾಲರೇ ಮುಂಬರುವ ಕಾನೂನು ರಿತ್ಯಾ ತೊಂದರೆಗಳಿಗೆ ನೇರ ಹೊಣೆಯಾಗುತ್ತಾರೆ.**

5. ಹೊರ ವಿಶ್ವವಿದ್ಯಾನಿಲಯದ ವರ್ಗಾವಣೆ ಪ್ರವೇಶ ಬಯಸುವ(3 ಮತ್ತು 5ನೇ ಸೆಮಿಸ್ಟರ್) ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು **ವಿಶ್ವವಿದ್ಯಾನಿಲಯದ ಪೂರ್ವಾನುಮತಿಯನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳಬೇಕು** ಹಾಗೂ ಭಾಷಾ/ಐಚ್ಛಿಕ ವಿಷಯ ಬದಲಾವಣೆಗೆ ಅವಕಾಶವಿರುವುದಿಲ್ಲ. (ವಿಶ್ವವಿದ್ಯಾನಿಲಯದಿಂದ ವಿತರಿಸಿರುವ ಅನುಮತಿ ಪತ್ರವನ್ನು ಕಡ್ಡಾಯವಾಗಿ ಪ್ರವೇಶಾತಿ ಅನುಮೋದನೆ ಸಮಯದಲ್ಲಿ ಲಗತ್ತಿಸಬೇಕು).

6. ಪ್ರಾಂಶುಪಾಲರು ವರ್ಗಾವಣೆ ಪ್ರವೇಶ ಕೋರಿ ಬರುವ ಹಾಗೂ ಹೊರ ರಾಜ್ಯದ ವಿಶ್ವವಿದ್ಯಾನಿಲಯದ ಅರ್ಜಿಗಳನ್ನು ವಿಶ್ವವಿದ್ಯಾನಿಲಯಕ್ಕೆ ರವಾನಿಸುವಾಗ ಸಂಬಂಧಿಸಿದ ಕೋರ್ಸುಗಳ ಹೆಚ್ಚುವರಿ ಪತ್ರಿಕೆಗಳನ್ನು ಅಭ್ಯಸಿಸುವ ಬಗ್ಗೆ (extra paper to be studied) ಪರಿಶೀಲಿಸಿ ದೃಢೀಕರಣದೊಂದಿಗೆ ಕಳುಹಿಸಬೇಕು.

7. **ಹೊರ ರಾಜ್ಯದ / ವಿದೇಶಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಅರ್ಹತಾ ಪತ್ರವನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.** (ವಿಶ್ವವಿದ್ಯಾನಿಲಯದಿಂದ ಪಡೆದಿರುವ ಅರ್ಹತಾ ಪತ್ರಗಳನ್ನು ಪ್ರವೇಶ ಅನುಮೋದನಾ ಪಟ್ಟಿಯ ಜೊತೆ ಲಗತ್ತಿಸುವುದು).

8. **ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ವರ್ಗಾವಣೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲ.** ನಿಗದಿತ ಶುಲ್ಕ ಪಾವತಿಸದೆ/ ಪೂರ್ಣ ದಾಖಲೆಗಳನ್ನು ಒದಗಿಸದಿದ್ದರೆ, ಅಂತಹ ಸಂದರ್ಭಗಳಲ್ಲಿ ವಿಶ್ವವಿದ್ಯಾನಿಲಯವು ಯಾವುದೇ ಪ್ರವೇಶ ಅನುಮೋದನೆ ನೀಡುವುದಿಲ್ಲ.

9. ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ಸಂಬಂಧಿಸಿದ ಕಾಲೇಜಿಗೆ ಹಾಜರುಪಡಿಸಬೇಕು.

    ಅ. ಕರ್ನಾಟಕ ದ್ವಿತೀಯ ಪಿ.ಯು.ಸಿ. ಮೂಲ ಅಂಕಪಟ್ಟಿ, ರಾಜ್ಯ/ಕೇಂದ್ರ/ಯುಜಿಸಿ ಮಾನ್ಯತೆ ಪಡೆದ ಮುಕ್ತ ಶಾಲೆ/ಸಂಸ್ಥೆಗಳು ನಡೆಸುವ 10+2 ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಮೂಲ ಅಂಕಪಟ್ಟಿ.

    ಆ. ವಿಶ್ವವಿದ್ಯಾನಿಲಯದಿಂದ ವಿತರಿಸಿರುವ ಮೂಲ ಅರ್ಹತಾ ಪ್ರಮಾಣ ಪತ್ರ(Eligibility Certificate ಹೊರ ರಾಜ್ಯ/ವಿದೇಶಿ/NRI ಅಭ್ಯರ್ಥಿಗಳಿಗೆ ಮಾತ್ರ) ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಇತರೆ ದಾಖಲೆಗಳು ಮತ್ತು ಹೆಚ್ಚಿನ ವಿವರಗಳನ್ನು ಸಂಬಂಧಿಸಿದ ಕಾಲೇಜಿನಲ್ಲಿ ಪಡೆಯಬಹುದು.

10. UGC ಪತ್ರ ಸಂಖ್ಯೆ:F.1-15/2015(ARC) ದಿನಾಂಕ: 18-03-2016ರ ರಿತ್ಯಾ ವಿಶ್ವವಿದ್ಯಾನಿಲಯ ಸಂಯೋಜಿತ ಎಲ್ಲಾ ಪದವಿ ಕಾಲೇಜುಗಳಲ್ಲಿ Anti-Ragging ಘಟಕವನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ Raggingನಿಂದ ತೊಂದರೆಯಾಗದಂತೆ (ಪ್ರಾಂಶುಪಾಲರು/ಮುಖ್ಯಸ್ಥರು ಸಮಿತಿವತಿಯಿಂದ) ಎಚ್ಚರವಹಿಸುವುದು.

11. UGC ಪತ್ರ ಸಂಖ್ಯೆ:F.91-7/2016(GS) ದಿನಾಂಕ: 05-04-2016ರ ರಿತ್ಯಾ Transgender (Third Gender) ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಸ್ವಾಯತ್ತ / ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶಾತಿ ಬಯಸಿದಲ್ಲಿ, ಅಂತಹ ವಿದ್ಯಾರ್ಥಿಗಳನ್ನು ತೃತೀಯ ಲಿಂಗ ಎಂದು ಪರಿಗಣಿಸಿ ಪ್ರವೇಶಾತಿ ಕಲ್ಪಿಸಲು ಆದ್ಯತೆ ನೀಡಲು ಹಾಗೂ ಇಂತಹ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನಾ ಪಟ್ಟಿ ಸಲ್ಲಿಸುವಾಗ ಪ್ರತ್ಯಕವಾಗಿ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವುದು.

**ವಿಶೇಷ ಸೂಚನೆ:** 1. ಪ್ರವೇಶಾತಿಯ ಕಡೆಯ ದಿನಾಂಕಗಳು ಮುಗಿದ ನಂತರ, ಯಾವುದೇ ವಿದ್ಯಾರ್ಥಿಗಳ ಮನವಿಗಳನ್ನು ವಿಶ್ವವಿದ್ಯಾನಿಲಯಕ್ಕೆ ರವಾನೆ(Forward) ಮಾಡಬಾರದಾಗಿ ಈ ಮೂಲಕ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸಿದೆ. ಪ್ರವೇಶ ಪ್ರಕ್ರಿಯೆಗಳನ್ನು ಕಡೆಯ ದಿನಾಂಕದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು.

2. ಪ್ರವೇಶ ಪಡೆಯುವ ಸಂದರ್ಭದಲ್ಲಿ 2004-05ರ ಪದವಿ ಕೋರ್ಸಿನ ನಿಯಾಮಾವಳಿ(Regulation) ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ತಿಳುವಳಿಕೆ ನೀಡಬೇಕೆಂದು ಸಹ ತಿಳಿಸಿದೆ.

3. ಹಳೇ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ Regulation ಗೆ ಅನುಗುಣವಾಗಿ ವಿಶ್ವವಿದ್ಯಾನಿಲಯದ ಅನುಮತಿ ಪಡೆಯುವುದು ಕಡ್ಡಾಯ, ಒಂದು ಪಕ್ಷ ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೆ ಪ್ರವೇಶ ಮಾಡಿದ ಪಕ್ಷದಲ್ಲಿ ಎಲ್ಲಾ Litigationಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಹೊಣೆಗಾರರಾಗುತ್ತಾರೆ ಎಂದು ಸ್ಪಷ್ಟಪಡಿಸಿದೆ.

**ಕರಡು ಕುಲಸಚಿವರಿಂದ**
**ಅನುಮೋದಿಸಿದೆ.**

19/5/16

ಉಪಕುಲಸಚಿವ(ಶೈಕ್ಷಣಿಕ)

19/5 19/5/16.

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಪಿ.ಎ./ಬಿ.ಸಿ.ಎಸ್/ ಬಿ.ಎಸ್‌ಸಿ./ ಬಿ.ಕಾಂ./ ಬಿ.ಬಿ.ಎಂ.(ಬಿಬಿಎ)/ಬಿ.ಟಿ.ಹೆಚ್./ಬಿ.ಎಸ್.ಡಬ್ಲ್ಯೂ./ಬಿ.ಫೈನ್.ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) ಪದವಿ ಕಾಲೇಜುಗಳ **ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.**
2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- **ಮಾಹಿತಿಗಾಗಿ**
3. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು.
4. ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಬಿ.ಆರ್.ಪ್ರಾಜೆಕ್ಟ್, ಶಿವಮೊಗ್ಗ.
5. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಾಜೆ, ಮಂಗಳೂರು.
6. ಕುಲಸಚಿವರು, ಗುಲಬರ್ಗ ವಿಶ್ವವಿದ್ಯಾನಿಲಯ, ಗುಲಬರ್ಗ.
7. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
8. ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಕುಲಸಚಿವರು, ಮಹಿಳಾ ವಿಶ್ವವಿದ್ಯಾನಿಲಯ, ಬಾಗಲಕೋಟೆ, ಬಿಜಾಪುರ.
10. ಕುಲಸಚಿವರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಬಳ್ಳಾರಿ.
11. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ, 4ನೇ ಬ್ಲಾಕ್, ಜಯನಗರ, ಬೆಂಗಳೂರು.
12. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾಂ.
13. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

14. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
15. ಕುಲಸಚಿವರು, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ, ಶಿಗ್ಗಾವಿ ತಾ., ಹಾವೇರಿ ಜಿಲ್ಲೆ.
16. ಕುಲಸಚಿವರು, ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯ, ಲಕ್ಷ್ಮೀಪುರಂ, ಮೈಸೂರು.
17. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ/ವಾಣಿಜ್ಯ ಮತ್ತು ಕಲಾ ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
19. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
20. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಅವರಣ, ಮಾನಸಗಂಗೋತ್ರಿ, ಮೈಸೂರು.
21. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
22. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
23. ಸಂಯೋಜಕರು, ಔಟ್‌ರೀಚ್ & ಆನ್ ಲೈನ್ ಪ್ರೋಗ್ರಾಂ ನಿರ್ದೇಶನಾಲಯ, ಪರಕಾಲ ಮಠ, ಮೈ.ವಿ.ವಿ.ನಿಲಯ, ಮೈಸೂರು.
24. ಆಡಳಿತ/ಪರೀಕ್ಷಾ/ಶೈಕ್ಷಣಿಕ ವಿಭಾಗದ ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ ಅಧೀಕ್ಷಕರು/ ಶೈಕ್ಷಣಿಕ ವಿಭಾಗದ ವಿಷಯ ನಿರ್ವಾಹಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
25. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳು ಇವರ ಆಪ್ತ ಸಹಾಯಕರುಗಳು, ಮೈವಿವಿ, ಮೈಸೂರು.
26. ಕಛೇರಿ ಪ್ರತಿ.